ಹುಸಿಯಾದ ಚರಿತ್ರೆಯ ರಚನೆಗೆ ಕಾರಣವಾಗಬಲ್ಲವು ಎನ್ನುವುದಕ್ಕೆ ಚರಿತ್ರಾರ್ಹ ದೃಷ್ಟಾಂತವಾಯಿತು. ಬರಬರುತ್ತ ಇತರೆ ಚರಿತ್ರಕಾರರು 'ಆರ್ಯರ ದಾಳಿ'ಯ ಮೂಲ ಸಿದ್ಧಾಂತವನ್ನೇ ಪ್ರಶ್ನಿಸತೊಡಗಿದಾಗ, ಅದರ ಪ್ರತಿಪಾದಕರು ತಮ್ಮ ನಿಲುವನ್ನು ಬದಲಾಯಿಸಿದರು. ಪಶ್ಚಿಮದಿಂದ ಬಂದ ಆರ್ಯರು ಯುದ್ಧ ಮಾಡಿ ನರಮೇಧ ನಡೆಸಿರಲಿಕ್ಕಿಲ್ಲ ಎಂದು ಒಪ್ಪಿದರೂ 'ಆರ್ಯ ದಾಳಿ' ಸತ್ಯ. ಆದರೆ ಅದು ಭೌತಿಕ ದಾಳಿಯಲ್ಲ ಬದಲಿಗೆ ಸಾಂಸ್ಕೃತಿಕ ದಾಳಿ ಎಂದು ವಾದಿಸತೊಡಗಿದರು. ಅಂದರೆ ಯುರೋಪಿನ ಕಡೆಯಿಂದ ಬಂದ ಆರ್ಯರು ತಮ್ಮ ಸಂಸ್ಕೃತಿ, ಕಲೆ ಮತ್ತು ಜ್ಞಾನವನ್ನು ತಮ್ಮೊಡನೆ ಭಾರತಕ್ಕೆ ತಂದು ಇಲ್ಲಿ ದುರ್ಬಲವಾಗಿದ್ದ ನೆಲ ಸಂಸ್ಕೃತಿಯನ್ನು ನಾಶ ಮಾಡಿ, ಜನರ ಮೇಲೆ ತಮ್ಮ ಸಬಲ ಸಂಸ್ಕೃತಿಯನ್ನು ಹೇರಿ, ತಮ್ಮದೆ 'ನಾಗರಿಕತೆ'ಯನ್ನು ಬೆಳೆಸಿದರು ಎಂದು ವಾದಿಸಿದರು.

ಕಾಲಕ್ರಮೇಣ ಈ 'ಸಂಸ್ಕೃತಿದಾಳಿ'ಯ ಸಿದ್ಧಾಂತಕ್ಕೂ ಅವಶ್ಯಕ ಪುರಾವೆಗಳು ದೊರಕದಾದವು. ಬದಲಿಗೆ ಆರ್ಯ ಸಂಸ್ಕೃತಿಯು, ಸಾವಿರಾರು ವರ್ಷಗಳಿಂದ ಭಾರತದ ವಾಯುವ್ಯದಲ್ಲಿಯೆ ವಿಕಾಸಗೊಂಡ ನೆಲನಾಗರಿಕತೆಯ ಜೀವನ ಕ್ರಮವಷ್ಟೆ ಎನ್ನುವುದಕ್ಕೆ ಪ್ರಬಲವಾದ ಕುರುಹುಗಳು ದೊರೆಯಲಾರಂಭಿಸಿದವು. ಹಾಗಾಗಿ ಈಗ ಕಾಣೆಯಾಗಿರುವ ಸರಸ್ವತಿ ನದಿಯ ಪಾತ್ರದ ಸುತ್ತ ಬೆಳೆದ ಸಮುದಾಯಗಳೆ ವೇದಗಳ ರಚನೆಯಲ್ಲಿ ತೊಡಗಿಕೊಂಡ ನಾಗರಿಕ ಆರ್ಯರು ಎಂಬ ಸಿದ್ಧಾಂತವನ್ನು ಇತ್ತೀಚೆಗೆ ಪ್ರತಿಪಾದಿಸಲಾಗುತ್ತಿದೆ. ಇದನ್ನು ಪುಷ್ಟೀಕರಿಸುವಂತೆ ಹಲವು ರೀತಿಯಲ್ಲಿ ಪುರಾವೆಗಳು ದೊರೆಯುತ್ತಿದ್ದರೂ, ಕೆಲವು ಚರಿತ್ರಕಾರರು 'ಆರ್ಯ ದಾಳಿ'ಯ

